






# ದಾಖಲೆ ನಿರ್ಮಿಸಿದ ಬಾಲ್ ಪೆನ್

ಆಚಾರ್ಯ ಮಕ್ಕೂರಿ ಶ್ರೀನಿವಾಸ ವಿಶ್ವದ ಅತಿ ದೊಡ್ಡ ಬಾಲ್‌ಪಾಯಿಂಟ್ ಪೆನ್ ಅನ್ನು ನಿರ್ಮಿಸಿ ಗಿನ್ನೆಸ್ ವಿಶ್ವದಾಖಲೆ ಸ್ಥಾಪಿಸಿದ್ದಾರೆ. ಶ್ರೀನಿವಾಸ ಅವರು ಚಿಕ್ಕ ಹುಡುಗನಾಗಿದ್ದಾಗ ಅವರ ತಾಯಿ ಒಂದು ಪೆನ್ ಅನ್ನು ಕೊಡುಗೆಯಾಗಿ ನೀಡಿದ್ದರಂತೆ. ಇದೇ ಶ್ರೀನಿವಾಸ್ ಅವರಿಗೆ ಇಷ್ಟು ದೊಡ್ಡ ಪೆನ್ ನಿರ್ಮಾಣಕ್ಕೆ ಪ್ರೇರಣೆ ಅಂತೆ.

ಈ ಪೆನ್‌ನ ಮೇಲೆ ಭಾರತೀಯ ಪುರಾಣದ ಮಹತ್ವದ ಚಿತ್ರಗಳನ್ನು ಕೆತ್ತಲಾಗಿದೆ. ಪೆನ್ 5.5 ಮೀಟರ್ (18 ಅಡಿ 0.53 ಇಂಚು) ಉದ್ದವಿದೆ. ಒಟ್ಟು 37.23 ಕೇಜಿ ಭಾರವಿದೆ. ಈ ಪೆನ್‌ನಿಂದಲೇ ಶ್ರೀನಿವಾಸ್ 'ಸ್ಮೈಲಿ ಫೇಸ್' ಅನ್ನು ಬರೆದಿದ್ದಾರೆ.

ಗಿನ್ನೆಸ್ ದಾಖಲೆ ಪಡೆದ ಈ ಪೆನ್ ಅನ್ನು ಹೈದರಾಬಾದ್‌ನಲ್ಲಿ ಪ್ರದರ್ಶನಕ್ಕಿಡಲಾಗಿತ್ತು. ಪೆನ್ ಅನ್ನು ಒಯ್ಯಲು ಶ್ರೀನಿವಾಸ್ ನಾಲ್ಕು ಜನ ಗೆಳೆಯರ ಸಹಾಯವನ್ನೂ ಕೋರಿದ್ದರು. ಈ ದೈತ್ಯ ಪೆನ್ ದಾಖಲೆ ವಿಶ್ವ ಮಟ್ಟದಲ್ಲಿ ಪೆನ್‌ಪ್ರಿಯರ ಗಮನ ಸೆಳೆದಿದೆ.

■ ಯು. ಅನಂತ್